# Press Meet

ದಿನಾಂಕ: 11-12-2022ರ ಕಾರ್ಯಕ್ರಮದ ದಿನದ ವೇಳಾಪಟ್ಟಿ

**60TH NATIONAL ROLLER SKATING CHAMPIONSHIPS 2022**
**DECEMBER 11TH TO 22ND 2022**
**Hosted By KARNATAKA ROLLER SKATING ASSOCIATION ®**
**Under the Aegis of Roller Skating Federation of India ಇದರ ಪ್ರಯುಕ್ತ**

ಮಾನ್ಯ ಶ್ರೀ. ಎಲ್.ಎ. ರವಿಸುಬ್ರಮಣ್ಯ, ಶಾಸಕರು, ಬಸವನಗುಡಿ ವಿಧಾನಸಭಾ ಕ್ಷೇತ್ರ ರವರ ಘನ ಅಧ್ಯಕ್ಷತೆಯಲ್ಲಿ ಚೆನ್ನಮ್ಮನಕೆರೆ ಆಟದ ಮೈದಾನದ ವಿವಿದ್ದೋದ್ದೇಶ ಕಟ್ಟಡದ ವಿವರಗಳು

1. ಮಾನ್ಯ ಶಾಸಕರು ಶ್ರೀ.ಎಲ್.ಎ. ರವಿಸುಬ್ರಮಣ್ಯ ರವರ ಪ್ರೋತ್ಸಾಹದಿಂದ 2011 ರಲ್ಲಿ ಸುಮಾರು 60 ರಿಂದ 70 ಸ್ಕೇಟಿಂಗ್ ಕ್ರೀಡಾ ಅಭ್ಯರ್ಥಿಗಳಿಂದ ಬೆಂಗಳೂರು ನಗರಕ್ಕೆ ಸೀಮಿತಗೊಂಡು ಆರಂಭಗೊಂಡಿದೆ.

2. 2012 ರಲ್ಲಿ 1000 ಕ್ಕೂ ಅಧಿಕ ಸ್ಕೇಟಿಂಗ್ ಕ್ರೀಡಾ ಅಭ್ಯರ್ಥಿಗಳು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಾಗೂ ವಿವಿಧ ರಾಜ್ಯಗಳಿಂದ ಕ್ರೀಡಾ ಅಭ್ಯರ್ಥಿಗಳು ಭಾಗವಹಿಸಿದ್ದಾರೆ.

3. 2017 ರಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರು ನಗರದ ಬಸವನಗುಡಿಯ ಕ್ರೀಡಾಪಟು ಆದ ಮಿಸ್ಟರ್ ಮಿಹರ್ ತಂದೆ ಇಂದುದರ್ ವಯಸ್ಸು 15 ವರ್ಷ ಇವರಿಗೆ ಇಂಟರ್ ನ್ಯಾಷನಲ್ ಅವಾರ್ಡ್, ಫ್ಲೆಂಡರ್ಸ್ ಗ್ರ್ಯಾಂಡ್ ಪ್ರಿಕ್ಸ್ ಇಂಟರ್ ನ್ಯಾಷನಲ್ ಮೆಡಲ್ ಇದರಲ್ಲಿ 2 ಸಿಲ್ವರ್ ಮತ್ತು 2 ಕಂಚು ಬಹುಮಾನವನ್ನು ಪಡೆದಿರುತ್ತಾರೆ.

4. 2022 ರಲ್ಲಿ ಗುಜರಾತ್‌ನಲ್ಲಿ ನಡೆದ ನ್ಯಾಷನಲ್ ಸ್ಕೇಟಿಂಗ್‌ನಲ್ಲಿ ಕರ್ನಾಟಕ ರಾಜ್ಯದ ಸ್ಕೇಟಿಂಗ್ ಕ್ರೀಡಾಪುಟುಗಳು ಭಾಗವಹಿಸಿ ಬಂಗಾರದ ಪದಕ, ಬೆಳ್ಳಿ ಪದಕ ಹಾಗೂ ಕಂಚಿನ ಪದಕಗಳನ್ನು ಗೆದ್ದ ಅಭ್ಯರ್ಥಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಕ್ರಮವಾಗಿ ಬಂಗಾರ ಪದಕ ಪಡೆದ ಕ್ರೀಡಾಪಟುವಿಗೆ ರೂ. 5.00 ಲಕ್ಷಗಳು, ಬೆಳ್ಳಿ ಪದಕ ಪಡೆದ ಕ್ರೀಡಾಪಟುವಿಗೆ ರೂ. 3.00 ಲಕ್ಷಗಳು ಹಾಗೂ ಕಂಚಿನ ಪದಕ ಪಡೆದ ಕ್ರೀಡಾಪಟುವಿಗೆ ರೂ. 2.00 ಲಕ್ಷಗಳ ನಗದನ್ನು ಚೆಕ್ ಮುಖಾಂತರ ಮೊದಲ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯ ಸರ್ಕಾರದಿಂದ ವಿತರಿಸಲಾಗಿದೆ.

5. ಮಾನ್ಯ ಶಾಸಕರು, ಶ್ರೀ.ಎಲ್.ಎ ರವಿಸುಬ್ರಮಣ್ಯ ರವರು ಅಧ್ಯಕ್ಷತೆಯಲ್ಲಿ ನವ ನಗರೋತ್ಥಾನದ ಅನುದಾನ ರೂ. 15.50 ಕೋಟಿಗಳಲ್ಲಿ ಚೆನ್ನಮ್ಮನಕೆರೆ ಆಟದ ಮೈದಾನದ ಪ್ರಗತಿಯ ನೋಟ.

-ಮುಂದುವರೆದಿದೆ-

6. ಮಾನ್ಯ ಶಾಸಕರು ಶ್ರೀ.ಎಲ್.ಎ. ರವಿಸುಬ್ರಮಣ್ಯ ರವರ ಪ್ರೋತ್ಸಾಹದಿಂದ ವಿಶ್ವಮಟ್ಟದಲ್ಲಿ ಮೂರನೇ ಅತಿ ದೊಡ್ಡ ಒಳಾಂಗಣ ಸ್ಕೇಟಿಂಗ್ ಆಟದ ಮೈದಾನವನ್ನು ನಿರ್ಮಿಸಿ 2022 ರಲ್ಲಿ 60TH NATIONAL ROLLER SKATING CHAMPIONSHIPS 2022 DECEMBER 11TH TO 22ND 2022 Hosted By KARNATAKA ROLLER SKATING ASSOCIATION ® Under the Aegis of Roller Skating Federation of India. ಕ್ರೀಡೆಯನ್ನು ಆಯೋಜಿಸಿ ಸುಮಾರು 27 ರಾಜ್ಯಗಳಿಂದ 5000 ಸಾವಿರಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ.

7. ಪ್ರಥಮ ಬಾರಿಗೆ ದಾಖಲೆ ಮಟ್ಟದಲ್ಲಿ ಕರ್ನಾಟಕ ರಾಜ್ಯದಿಂದ 330 ರಿಂದ 350 ಅತ್ಯಧಿಕ ಸ್ಕೇಟಿಂಗ್ ಕ್ರೀಡಾ ಅಭ್ಯರ್ಥಿಗಳು ನಗರ ಮತ್ತು ವಿವಿಧ ಜಿಲ್ಲೆಗಳಿಂದ ಆಗಮಿಸುತ್ತಿದ್ದಾರೆ.

8. ವಿವಿಧ ರಾಜ್ಯಗಳಿಂದ ಭಾಗವಹಿಸಿದ ಕ್ರೀಡಾಪಟುಗಳ ವಿವರಗಳು 1) 5 ರಿಂದ 7 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, 2) 7 ರಿಂದ 9 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, 3) 9 ರಿಂದ 11 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, 4) 11 ರಿಂದ 14 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, 5) 14 ರಿಂದ 17 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, 6) 17 ರಿಂದ 35 ವರ್ಷಗಳ ವಯಸ್ಸಿನ ಕ್ರೀಡಾಪಟುಗಳು, ಮತ್ತು ಮಾಸ್ಟರ್ಸ್ 35 ವರ್ಷ ಮೇಲ್ಪಟ್ಟವರು.

9. ಗನ್ ಶೂಟಿಂಗ್ ಸ್ಪಾಟ್ ಆವರಣದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕನಿಷ್ಠ 12 ವರ್ಷದಿಂದ ಸಾಮರ್ಥ್ಯನುಸಾರ ಭಾಗವಹಿಸಿ ಇದರಲ್ಲಿ ತರಬೇತಿ ಹೊಂದಿದ ಅಭ್ಯರ್ಥಿಗಳು ಮುಂದಿನ ದಿನಮಾನಗಳಲ್ಲಿ ಭಾರತ ದೇಶದ ವತಿಯಿಂದ ನ್ಯಾಷನಲ್ ಗೇಮ್ಸ್, ಇಂಟರ್ ನ್ಯಾಷನಲ್ ಗೇಮ್ಸ್‌ಗಳಲ್ಲಿ ಪಾಲ್ಗೊಳ್ಳಲು ಸುಸಜ್ಜಿತವಾದ ಗನ್ ಶೂಟಿಂಗ್ ಸ್ಪಾಟ್ ನಿರ್ಮಿಸಲಾಗಿದೆ. ಇದರ ಜೊತೆಗೆ ವಿವಿಧ ಹುದ್ದೆಗಳಿಗೆ ಸೇರಲು ಹೋಂ ಗಾರ್ಡ್ಸ್, ಸೆಕ್ಯೂರಿಟಿ, ಪೋಲೀಸ್, ಮಿಲಿಟರಿ, ಹಾಗೂ ವಿವಿಧ ಇಲಾಖೆಗಳಲ್ಲಿ ಉದ್ಯೋಗಕ್ಕೆ ಸೇರಲು ಉತ್ತಮ ಅವಕಾಶಗಳು ಲಭ್ಯವಿರುತ್ತವೆ.

10. ISSF (Inter National Sports Shooting Federation) Standards ನಲ್ಲಿ ಏರ್ ಗನ್ ಇನ್‌ಡೋರ್ ಸ್ಪೋರ್ಟ್ಸ್ ಶೂಟಿಂಗ್ 10 ಮೀಟರ್ ರೇಂಜ್‌ಗೆ ಗುರಿ ಹೊಂದಲು ನಿರ್ಮಿಸಲಾಗಿದೆ. ಇದರ ಸಾಮರ್ಥ್ಯ 177 ಕ್ಯಾಲಿಬರ್ ಹೊಂದಿದ ರೈಫಲ್ ಮತ್ತು ಪಿಸ್ತೂಲ್ ಇಡಲಾಗಿದೆ.

11. ಏರ್ ಗನ್ ಇನ್‌ಡೋರ್ ಸ್ಪೋರ್ಟ್ಸ್ ಶೂಟಿಂಗ್ 10 ಮೀಟರ್ ರೇಂಜ್‌ನ ಒಲಿಂಪಿಕ್ ಇಂಡಿಯಾ ಗೇಮ್‌ನಲ್ಲಿ ಭಾಗವಹಿಸಲು ಈ ಕ್ರೀಡಾಂಗಣ ಸ್ಪೂರ್ತಿದಾಯಕವಾಗಿದ್ದು, ಪುರುಷ ಮತ್ತು ಮಹಿಳೆಯರು ಭಾಗವಹಿಸಬಹುದಾಗಿದೆ.

12. ಏರ್ ಗನ್ ಇನ್‌ಡೋರ್ ಸ್ಪೋರ್ಟ್ಸ್ ಶೂಟಿಂಗ್ 10 ಮೀಟರ್ ರೇಂಜ್‌ನ ಸುರಕ್ಷತೆ ಮತ್ತು ತರಬೇತಿ, ತಾಂತ್ರಿಕ ಪರಿಣಿತಿ ಹೊಂದಿದ ಕದಂಬ ಸ್ಪೋರ್ಟ್ಸ್ ರವರು ಅನೇಕ ಬಹುಮಾನಗಳನ್ನು ರಾಷ್ಟ್ರಮಟ್ಟದಲ್ಲಿ ಹೊಂದಿದ್ದು ಇವರ ಮಾರ್ಗದರ್ಶನದಲ್ಲಿ ತರಬೇತಿ ನೀಡಲಾಗುತ್ತಿದೆ.

13. ಕ್ರೀಡಾ ಮೈದಾನದಲ್ಲಿ ಸಮತಟ್ಟಾದ ಮೈದಾನ ಹಾಗೂ ಆಟವಾಡುವುದನ್ನು ನೋಡುವುದಕ್ಕಾಗಿ ಗ್ಯಾಲರಿ ಹಾಗೂ ಆಸನ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.